
ಪಠಣ ಕುತೂಹಲ

ಎಂ.ಎಸ್. ಶ್ರೀರಾಮ್



# ಅಂಬೇಡ್ಕರ್: ಬೌದ್ಧ ಧರ್ಮ, ಅರ್ಥಶಾಸ್ತ್ರ ಹಾಗೂ ಸಾಮಾನ್ಯ ಜೀವನ

ಅಂಬೇಡ್ಕರ್ ಅವರನ್ನು ಒಂದು ಪ್ರತೀಕದಂತೆ, ದಲಿತರ ನಾಯಕರಂತೆ, ವಿಚಾರಧಾರೆಯ ಪ್ರವರ್ತಕರಂತೆ ಕಾಣುತ್ತಿರುವ ಸಮಯದಲ್ಲಿ, ಎಲ್ಲ ರೀತಿಯ ಅಭದ್ರತೆಗಳುಳ್ಳ ಮಾನವನಾಗಿ ಸವಿತಾ ಅಂಬೇಡ್ಕರರ ಪುಸ್ತಕ ಚಿತ್ರಿಸುತ್ತದೆ.




2023ರಲ್ಲಿಯೇ ಅಂಬೇಡ್ಕರ್ ಬಗ್ಗೆ ಐದು ಪುಸ್ತಕಗಳು ಬಂದಿವೆ. ಇತ್ತೀಚಿನ ಸಾಹಿತ್ಯವನ್ನು ತಿರುವಿಹಾಕಿದಾಗ ಅಂಬೇಡ್ಕರ್ ಬಗ್ಗೆ ಸತತವಾಗಿ ಸಾಹಿತ್ಯ ಬರುತ್ತಿರುವುದರಲ್ಲಿ ಏನಾದರೂ ಗಾಢವಾದ ಅರ್ಥವಿದೆಯೇ? ಅಶೋಕ್ ಗೋಪಾಲ್ ಬರೆದಿರುವ ಅತ್ಯಂತ ಅಧಿಕಾರಿಕ ಮತ್ತು ವಿವರವಾದ ಜೀವನ ಚರಿತ್ರೆಯಲ್ಲಿ ಹೊಸ ಸಾಮಗ್ರಿ ಕಾಣಿಸುತ್ತದೆ. ಮತ್ತು ಆ ಹೊಸ ಪರಿಕರದೊಂದಿಗೆ ಅಂಬೇಡ್ಕರ್ ಬಗೆಗಿನ ಒಳನೋಟಗಳು ಪ್ರಖರವಾಗುತ್ತಾ ಹೋಗುತ್ತಿದ್ದಂತೆ, ಸಮಕಾಲೀನ ಸಂರ್ಭದಲ್ಲಿಯೂ ಅಂಬೇಡ್ಕರ್ ಪ್ರಸ್ತುತತೆಯನ್ನು ಚರ್ಚಿಸಲು ಸಾಧ್ಯವಾಗುತ್ತದೆ. ನಮ್ಮ ಸಂವಿಧಾನವು ಅನೇಕ ಸವಾಲುಗಳನ್ನು ಎದುರಿಸುತ್ತಿರುವ ಸಂದರ್ಭದಲ್ಲಿ ಅದರ ಕರ್ತೃ ಮತ್ತು ಅವರ ಮೂಲ ಚಿಂತನೆ, ಮತ್ತು ಭಾವನೆಯತ್ತ ಹೋಗುವುದೂ, ಆ ಸಂವಿಧಾನ ರಚನೆಯಲ್ಲಿ ಪ್ರಮುಖ ಪಾತ್ರ ವಹಿಸಿದ ಅವರ ಜೀವನ ಮತ್ತು ಅನುಭವಗಳಿಂದ ಉಂಟಾದ ವಾದಸರಣಿಯನ್ನು ಅರ್ಥಮಾಡಿಕೊಳ್ಳುವುದೂ, ಸಮಕಾಲೀನ ದೃಷ್ಟಿಯನ್ನು ಬೀರಿ ಗತದ ಚರ್ಯೆಗಳ ಮಹತ್ವವನ್ನು ಪುನರವಲೋಕನ ಮಾಡುವುದೂ ಆಸಕ್ತಿಯ ಕೆಲಸ. ಜಾತಿ, ಧರ್ಮ, ಸಮಾನತೆ, ತಾತ್ವಿಕತೆ, ರಾಜಕೀಯ, ಕೇಂದ್ರೀಕರಣ–ವಿಕೇಂದ್ರೀಕರಣ, ಪ್ರಾತಿನಿಧ್ಯ, ಆಕಾಂಕ್ಷೆ – ಈ ಎಲ್ಲವನ್ನೂ ನಮ್ಮ ಸಮಕಾಲೀನ ಸಂದರ್ಭದಲ್ಲಿ ಮತ್ತೆ ನಿಕಷಕ್ಕೊಡ್ಡುವುದು ಅತ್ಯವಶ್ಯಕವಾಗಿದೆ. ಬಲಪಂಥೀಯರು, ಕೇಜ್ರಿವಾಲರಂತಹ ರಾಜಕಾರಣಿಗಳು ಅಂಬೇಡ್ಕರನ್ನು ತಮ್ಮದಾಗಿಸಿಕೊಳ್ಳುತ್ತಿರುವುದರ ಹಿಂದಿನ ಆಲೋಚನೆ ಏನಿರಬಹುದು ಎಂದು ಊಹಿಸುವುದೂ ಆಸಕ್ತಿಯ ಕೆಲಸ. ಪ್ರತಿ ಸಂದರ್ಭಕ್ಕೂ ಮಹಾತ್ಮಾ ಗಾಂಧಿಯ ಒಂದು ಮಾತು ಉಲ್ಲೇಖಿಸುವಂತೆ, ಪ್ರತಿ ವಿಷಯಕ್ಕೂ ಅಂಬೇಡ್ಕರ್ ಅವರ ಚಿಂತನೆಯನ್ನೂ ನಾವು ಪಡೆಯಬಹುದು. ನಮ್ಮ ಸಮಕಾಲೀನ ಸಂದರ್ಭವನ್ನು ಹೆಚ್ಚು ಅರ್ಥಮಾಡಕೊಳ್ಳಲು ಅಂಬೇಡ್ಕರ್ ಅವರ ವಿಚಾರಗಳು ನಮಗೆ ಸಹಾಯಕವಾಗುತ್ತವೆ.

ಅಂಬೇಡ್ಕರ್ ಅವರು ಸಂವಿಧಾನ ರೂಪಿಸುವಾಗ ಸಮಾಜ ಮತ್ತು ಜಾತಿಪದ್ಧತಿಯ ಬಗ್ಗೆ, ಕಾನೂನು ಮತ್ತು ಮಾನವಾಧಿಕಾರಗಳ ಬಗ್ಗೆ ಎಷ್ಟು ಪ್ರಖರವಾಗಿ ವಿಚಾರಗಳನ್ನು ಮಂಡಿಸಿದ್ದರೋ, ಅಷ್ಟೇ ಪ್ರಖರವಾಗಿ ಅರ್ಥಶಾಸ್ತ್ರಕ್ಕೆ ಅರ್ಥವ್ಯವಸ್ಥೆಗೆ ಸಂಬಂಧಿಸಿಯೂ ಬರೆದಿದ್ದರು.